**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು**

**<u>ಓ.ಎಸ್.ನಂ.52 / 2016</u>**

ದಿನಾಂಕಃ14-12-2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

ಪಿ.ಡಬ್ಲ್ಯುಃ1

**<u>ಮುಖ್ಯ ವಿಚಾರಣೆಃ ವಕೀಲರಿಂದಃ-</u>**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸುತ್ತಿದ್ದೇನೆ. ಅದನ್ನು ಓದಿ ತಿಳಿದು, ಸಹಿ ಮಾಡಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

ನಾನು ಈಗಾಗಲೇ ನ್ಯಾಯಾಲಯಕ್ಕೆ ವಾದಿಯರು ನನ್ನ ಹೆಸರಿಗೆ ಜಾರಿ ಮಾಡಿಕೊಟ್ಟಿರುವ ಸಾಮಾನ್ಯ ಮುಕ್ತಿಯಾರ್ ನಾಮೆಯನ್ನು ದಾಖಲಿಸಿದ್ದು ನಿಪಿ-1 ಎಂದು, ಬೀರೂರು ಪುರಸಭಾ ವ್ಯಾಪ್ತಿಯ ಸ್ವತ್ತಿನ ಸಂಖ್ಯೆಃ5212 ಕ್ಕೆ ಸಂಬಂಧಿಸಿದ ಆಸ್ತಿ ತೆರಿಗೆ ಬೇಡಿಕೆಯ ದೃಢೀಕೃತ ನಕಲನ್ನು ನಿಪಿ-2 ಎಂದು, ಪುರಸಭೆ ಮುಖ್ಯಾಧಿಕಾರಿಯವರು ವಿತರಿಸಿರುವ ಆಸ್ತಿ ಸಂಖ್ಯೆಃ1047 ರ ದೃಢೀಕೃತ ನಕಲನ್ನು ನಿಪಿ-3 ಎಂದು, ಪುರಸಭೆ ಕಾರ್ಯಾಲಯ, ಬೀರೂರುರವರು ದಿಃ10-1-2013 ರಯಿ ಜರುಗಿಸಿದ ಸಭಾ ನಡವಳಿಯ ದೃಢೀಕೃತ ನಕಲನ್ನು ನಿಪಿ-4 ಎಂದು, ದಿಃ16-2-2013, ದಿಃ19-4-2013, ದಿಃ9-7-2013 ರ ಪತ್ರಗಳ ಕಛೇರಿ ಪ್ರತಿಯನ್ನು ನಿಪಿ-5 ರಿಂದ ನಿಪಿ-7 ಎಂದು, ದಿಃ24-7-2013 ರಂದು ಪುರಸಭೆ ಬೀರೂರುರವರು 1 ನೇ ವಾದಿಗೆ ನೀಡಿರುವ ಹಿಂಬರಹವನ್ನು ನಿಪಿ-8 ಎಂದು, ದಿಃ11-10-2012 ರಂದು 1 ನೇ ವಾದಿಯು ಪುರಸಭೆ ಬೀರೂರುರವರಿಗೆ ನೀಡಿದ ಪತ್ರದ ಕಛೇರಿ ಪ್ರತಿಯನ್ನು ನಿಪಿ-9 ಎಂದು, ದಿಃ16-7-2013 ರಂದು ಪುರಸಭೆ ಬೀರೂರು ರವರು ನೀಡಿರುವ ಸಭಾ ನಡವಳಿಯ ದೃಢೀಕೃತ ನಕಲನ್ನು ನಿಪಿ-10 ಎಂದು, ಕುಲುಮೆ ರಂಗಪ್ಪ ಹಾಗೂ ಬಿ.ಟಿ. ತಿಮ್ಮಯ್ಯರವರಿಗೆ ಸಂಬಂಧಿಸಿದ ಮರಣ ಪ್ರಮಾಣಪತ್ರದ ದೃಢೀಕೃತ ನಕಲನ್ನು ನಿಪಿ-11 ಮತ್ತು ನಿಪಿ-12 ಎಂದು, ವಾದಿಯರ ಕುಟುಂಬದ ವಂಶವೃಕ್ಷದ ದೃಢೀಕೃತ ನಕಲನ್ನು ನಿಪಿ-13 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು ಅನುಮತಿ ನೀಡಲಾಯಿತು.**
**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

(ರಘುರಾಮ. ಎನ್.ಎಸ್.)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.